# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 89/14-15.

ದಿನಾಂಕ : 25-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

**ಮೇಲ್ಮನವಿದಾರರು**

ಶ್ರೀ ಕೃಷ್ಣ ಗೌಡ
ಬಿನ್: ದಿ|| ಮಂಜಪ್ಪ ಗೌಡ.
ಮೈರೋಡಿ ಮನೆ.
ಮಿತ್ತಬಾಗಿಲು ಗ್ರಾಮ, ಮಲವಂತಿಗೆ ಅಂಚೆ,
ಬೆಳ್ತಂಗಡಿ ತಾಲೂಕು ದ.ಕ.
(ನ್ಯಾಯವಾದಿ ಶ್ರೀ ಸುಬ್ರಹ್ಮಣ್ಯ ಕುಮಾರ್ ಅಗರ್ತ)

-ಮತ್ತು-

**ಪ್ರತಿವಾದಿಯವರು**

1. ಕಂದಾಯ ನಿರೀಕ್ಷಕರು,
   ಬೆಳ್ತಂಗಡಿ ಹೋಬಳಿ,
   ಬೆಳ್ತಂಗಡಿ ತಾಲೂಕು ದ.ಕ.
2. ತಹಶೀಲ್ದಾರರು,
   ಬೆಳ್ತಂಗಡಿ ತಾಲೂಕು ದ.ಕ.
3. ಶ್ರೀಮತಿ ಮೋಂಟಿ ಯಾನೆ ಅನಂತವತಿ
   ಕೋಂ: ತಮ್ಮಯ್ಯ ಅಜ್ರಿ, ಬಂಗಾಡಿ ಟೌನ್
   ಇಂದಬೆಟ್ಟು ಗ್ರಾಮ, ಬಂಗಾಡಿ ಅಂಚೆ,
   ಬೆಳ್ತಂಗಡಿ ತಾಲೂಕು .ದ.ಕ.
4. ಶ್ರೀಮತಿ ಲಲಿತ ಕೋಂ: ಬಾಬು ಗೌಡ
   ಮಿತ್ತಬಾಗಿಲು ಗ್ರಾಮ, ಮಲವಂತಿಗೆ ಅಂಚೆ,
   ಬೆಳ್ತಂಗಡಿ ತಾಲೂಕು ದ.ಕ.
5. ಶ್ರೀ ಶೀನಪ್ಪ ಬಿನ್: ದಿ|| ಮಂಜಪ್ಪ ಗೌಡ
   ಮೈರೋಡಿ ಮನೆ. ಮಿತ್ತಬಾಗಿಲು ಗ್ರಾಮ,
   ಮಲವಂತಿಗೆ ಅಂಚೆ, ಬೆಳ್ತಂಗಡಿ ತಾಲೂಕು ದ.ಕ.
6. ಶ್ರೀಮತಿ ಸುಮತಿ ಕೋಂ: ಕೃಷ್ಣಪ್ಪ
   ಅತಿಕಟ್ಟೆ ಮನೆ, ಇಡ್ಕಿ ಗ್ರಾಮ,
   ಮೂಡಿಗೆರೆ ತಾಲೂಕು
7. ಶ್ರೀಮತಿ ಕಮಲ ಕೋಂ: ಧರ್ನಪ್ಪ
   ಅತಿಕಟ್ಟೆ ಮನೆ, ಇಡ್ಕಿ ಗ್ರಾಮ,
   ಮೂಡಿಗೆರೆ ತಾಲೂಕು.
8. ಶ್ರೀಮತಿ ಗಿರಿಜ ಕೋಂ:ಸೋಮನಾಥ

ನೆರಿಯ ಗ್ರಾಮ,
ಬೆಳ್ತಂಗಡಿ ತಾಲೂಕು ದ.ಕ.

9. ಶ್ರೀ ಸುಂದರ ಬಿನ್: ದಿ|| ಮಂಜಪ್ಪ ಗೌಡ
ಮೈರೋಡಿ ಮನೆ, ಮಿತ್ತಬಾಗಿಲು ಗ್ರಾಮ
ಮಲವಂತಿಗೆ ಅಂಚೆ,
ಬೆಳ್ತಂಗಡಿ ತಾಲೂಕು ದ.ಕ.

10. ಶ್ರೀಮತಿ ಸೀತಮ್ಮ ಕೋಂ: ನವೀನ
ಕೊಕ್ಕಡ ಗ್ರಾಮ ಮತ್ತು ಅಂಚೆ,
ಬೆಳ್ತಂಗಡಿ ತಾಲೂಕು ದ.ಕ.

11. ಶ್ರೀಮತಿ ಇಂದಿರಾ ಕೋಂ: ಸುಂದರೇಶ
ಮಂಡೋಳಿ ಗ್ರಾಮ
ತೀರ್ಥಹಳ್ಳಿ ತಾಲೂಕು
ಶಿವಮೊಗ್ಗ ಜಿಲ್ಲೆ.

12. ಶ್ರೀ ಉದಯ ಬಿನ್: ದಿ|| ಮಂಜಪ್ಪ ಗೌಡ
ಮೈರೋಡಿ ಮನೆ, ಮಿತ್ತಬಾಗಿಲು ಗ್ರಾಮ
ಮಲವಂತಿಗೆ ಅಂಚೆ,
ಬೆಳ್ತಂಗಡಿ ತಾಲೂಕು ದ.ಕ.

**--**

<u>ಪ್ರಸ್ತಾವನೆ</u> :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರನ್ವಯ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಎಂ.ಆರ್ 64/83-84 ರಂತೆ ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಸ.ನಂ. 3/3 ರ ಪೈಕಿ ವಿಸ್ತೀರ್ಣ 0.56 ಎಕ್ರೆ ಜಮೀನು ಭೂನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ. ಈ 0.56 ಎಕ್ರೆ ಜಮೀನು ಸೇರಿ ಒಟ್ಟು 7.79 ಎಕ್ರೆ ಜಮೀನಿಗೆ LRY 02/74-75 ರಂತೆ ನನ್ನ ತಂದೆ ಮಂಜಪ್ಪ ಗೌಡ ಬಿನ್ ರಾಮು ಗೌಡರಿಗೆ ಹಕ್ಕುಪತ್ರವನ್ನು 09-04-1981 ರಂದು ನೀಡಲಾಗಿತ್ತು. ಈ ಹಕ್ಕುಪತ್ರದಂತೆ ಎಂ.ಆರ್ 64/83-84 ರಂತೆ ಮ್ಯುಟೇಶನ್ ದಾಖಲಾಗಿ ಆದೇಶವಾಗುವ ಸಮಯ ಸ.ನಂ. 3/3 ಪೈಕಿ 0.56 ಎಕ್ರೆಯನ್ನು ಎಂ.ಆರ್ ವಹಿಯಲ್ಲಿ ದಾಖಲಿಸಿರುವುದಿಲ್ಲ ಹಾಗೂ ತನ್ನ ತಂದೆಯ ಹೆಸರಲ್ಲಿ ಪಹಣಿಯನ್ನು ದಾಖಲಿಸಿಲ್ಲವೆಂದು ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯಿತಿ ಬಗ್ಗೆ ಇಂಡಿಯನ್ ಲಿಮಿಟೇಶನ್ ಆ್ಯಕ್ಟ್ ನ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 26-08-2014 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ : 29-03-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿದಾರರ ತಂದೆ ಮಂಜಪ್ಪ ಗೌಡರಿಗೆ ಬೆಳ್ತಂಗಡಿ ಭೂನ್ಯಾಯ ಮಂಡಳಿಯಿಂದ LRY ನಂಬ್ರ 02/74-75 ದಿನಾಂಕ : 28-04-1979 ರಂತೆ ಮಂಜೂರಾಗಿ ದಿನಾಂಕ : 09-04-1981 ರಂದು ಹಕ್ಕು ಪತ್ರ ನೀಡಲಾಗಿದೆ. ಇದರಲ್ಲಿ ಸ.ನಂ. 3/3 ವಿಸ್ತೀರ್ಣ 0.56 ಎಕ್ರೆಯೂ ಒಳಗೊಂಡಿದೆ. ಆದರೆ ಮ್ಯುಟೇಶನ್ ನಂ. 64/83-84 ರಂತೆ ಖಾತೆ ಬದಲಾವಣೆ ಸಮಯ ಪ್ರಶ್ನಿತ ಸ.ನಂ. 3/3 ವಿಸ್ತೀರ್ಣ 0.56 ಎಕ್ರೆ ಜಮೀನು ಬಿಟ್ಟು ಹೋಗಿದ್ದು, ಪಹಣಿಯಾಗಿರುವುದಿಲ್ಲ. ಈ ಬಿಟ್ಟುಹೋದ ಜಮೀನು 0.56 ಎಕ್ರೆಯ ಖಾತೆ ದಾಖಲು ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ತಂದೆಗೆ ಭೂನ್ಯಾಯ ಮಂಡಳಿಯ LRY 02/74-75 ರಂತೆ ಹಕ್ಕುಪತ್ರ ನೀಡಲಾದ ಜಮೀನು ಸ.ನಂ. 3/3 ವಿಸ್ತೀರ್ಣ 0.56 ಎಕ್ರೆ ಮ್ಯುಟೇಶನ್ ಆದೇಶ ಸಮಯ ಬಿಟ್ಟುಹೋಗಿರುವುದು ಕಂಡು ಬರುತ್ತದೆ. ಇದರಿಂದ ಈ ಒಂದು ಸ.ನಂ ಕ್ಕೆ ಪಹಣಿ ದಾಖಲು ಆಗಿರುವುದಿಲ್ಲ. ಮೇಲ್ಮನವಿದಾರರ ತಂದೆಗೆ ಈ ಜಮೀನು ಭೂನ್ಯಾಯಮಂಡಳಿಯಿಂದ ಮಂಜೂರಾಗಿದ್ದು ಅವರ ಹೆಸರಲ್ಲಿ ಪಹಣಿ ದಾಖಲಾಗಬೇಕಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ.**

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಸ.ನಂ. 3/3 ಬಾಗಾಯಿತು ವಿಸ್ತೀರ್ಣ 0.56 ಎಕ್ರೆ ಜಮೀನು ಭೂನ್ಯಾಯ ಮಂಡಳಿಯಿಂದ ಮೇಲ್ಮನವಿದಾರರ ತಂದೆಯ ಹೆಸರಿಗೆ ಮಂಜೂರಾಗಿದ್ದು, ಸದರಿ ಮಂಜೂರಾತಿಯಂತೆ ಖಾತೆ ದಾಖಲಿಸಲು ಬಿಟ್ಟು ಹೋಗಿರುವ ಜಮೀನನ್ನು ಸಂಬಂಧಿಸಿದವರ ಹೆಸರಲ್ಲಿ ಖಾತೆ ದಾಖಲಿಸಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ ಕೆ.ವಿ. ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಸುಬ್ರಹ್ಮಣ್ಯ ಕುಮಾರ್ ಅಗರ್ತ ಇವರ ಮುಖಾಂತರ ಜ್ಯಾರಿ.

ಪ್ರತಿ: ಪ್ರತಿವಾದಿಯವರಿಗೆ ನೋಂದಾಯಿತ ಅಂಚೆ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ ಎಲ್.ಆರ್.ವೈ 03/74-75 ಪುಟಸಂಖ್ಯೆ 1 ರಿಂದ 144 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.